# ಶಬರಿ

ಶಬರಿ ಒಬ್ಬ ಬೇಡರ ರಾಜನ ಮಗಳು. ಇವಳ ಮದುವೆಯ ಹಿಂದಿನ ದಿನ ಸಾವಿರ ಸಾವಿರ ಸಂಖ್ಯೆಗಳಲ್ಲಿ ಕುರಿ, ಮೇಕೆ, ಜಿಂಕೆ ಮೊಲ ಮೊದಲಾದ ಪ್ರಾಣಿಗಳನ್ನು ತಂದಿದ್ದರು. ಅಷ್ಟು ಪ್ರಾಣಿಗಳು ಏಕೆಂದು ಕೇಳಲಾಗಿ ಅದು ಶಬರಿಯ ಮದುವೆಗೆ ಔತಣಕ್ಕಾಗಿ ತರಿಸಿದ್ದಾರೆಂದು ತಿಳಿಯಿತು. ಶಬರಿಗೆ ಇದನ್ನು ಕೇಳಿ ನೋವಾಯಿತು. ಅವಳು ಪ್ರಾಣಿಹಿಂಸೆಯನ್ನು ವಿರೋಧಿಸುತ್ತಿದ್ದಳು. ಹೀಗಾಗಿ ಅವಳು ಮದುವೆಯನ್ನೇ ಮಾಡಿಕೊಳ್ಳದೆ ವೈರಾಗ್ಯ ಭಾವದಿಂದ ಅರಮನೆಯಿಂದ ಹೊರಟುಬಿಟ್ಟಳು. ಹಾಗೇ ಸಂಚರಿಸುತ್ತಾ ಋಷ್ಯಮೂಕ ಪರ್ವತಕ್ಕೆ ಬಂದಳು. ಅಲ್ಲಿ ಮಾತಂಗ ಮಹರ್ಷಿಗಳಿದ್ದರು. ಶಬರಿ ಆ ಮಹಾಮಹಿಮರ ಸೇವೆಯನ್ನು ಮಾಡುತ್ತಾ ಅಲ್ಲಿಯೇ ನೆಲೆಸಿದಳು. ಮಾತಂಗ ಮಹಾಮುನಿಗಳು ನಿರ್ವಾಣ ಹೊಂದುವಾಗ ಶಬರಿಗೆ "ನೀನು ಫಲಾಪೇಕ್ಷೆಯಿಲ್ಲದೆ ನನ್ನ ಸೇವೆಯನ್ನು ಮಾಡಿರುವೆ, ಶ್ರೀಮನ್ನಾರಾಯಣನು ರಾಮನಾಗಿ ಅವತರಿಸಿದಾಗ ನಿನಗೆ ದರ್ಶನ ನೀಡುತ್ತಾನೆ. ಅಲ್ಲಿಯವರೆಗೂ ನೀನು ಇಲ್ಲಿಯೇ ನೆಲೆಸಿರು' ಎಂದು ಹೇಳಿದ್ದರು. ಇಷ್ಟರಲ್ಲಿ ಶಬರಿ ಮುದುಕಿಯಾಗಿದ್ದಳು.

ಶಬರಿ ಮುನಿಗಳ ವಚನದಂತೆ ರಾಮನಿಗಾಗಿ ಕಾಯುತ್ತಿದ್ದಳು. ರಾಮ ಬಂದಾಗ ಅವನಿಗೆ ಏನು ಕೊಡುವುದು? ಶಬರಿ ಪ್ರತಿದಿನ ಕೋಲೂರಿಕೊಂಡು ಕಾಡಿಗೆ ಹೋಗಿ ಹಣ್ಣುಗಳನ್ನು ಸಂಗ್ರಸುತ್ತಿದ್ದಳು. ಮನೆಗೆ ತಂದು ಅದನ್ನು ಕೊಂಚ ಕಚ್ಚಿ ರುಚಿ ನೋಡಿ ಸಿಹಿಯಾದದ್ದನ್ನು ರಾಮನಿಗಾಗಿ ತೆಗೆದಿಡುತ್ತಿದ್ದಳು. ಹೀಗೆ ವರ್ಷಗಳೇ ಉರುಳಿಹೋದವು. ಶಬರಿ ಮುಪ್ಪಿನಿಂದಾಗಿ ಬಲಹೀನಳಾದರೂ ತನ್ನ ನಿತ್ಯದ ಅಭ್ಯಾಸವನ್ನು ತಪ್ಪಿಸಲಿಲ್ಲ. ಅಂತೂ ಒಂದು ದಿನ ಶಬರಿಯ ಕಾಯುವಿಕೆ ಸಾರ್ಥಕವಾಗಿತ್ತು. ಶ್ರೀರಾಮನು ಸೀತೆಯನ್ನು ಹುಡುಕುತ್ತ ಋಷ್ಯಮೂಕ ಪರ್ವತಕ್ಕೆ ಬಂದನು. ಅಲ್ಲಿ ಅನೇಕ ಮಹರ್ಷಿಗಳು ತಪಸ್ಸಿನಲ್ಲಿ ನಿರತರಾಗಿದ್ದರು. ಅವರೆಲ್ಲಾ ರಾಮನ ಬರುವಿಕೆಗಾಗಿ ಕಾಯುತ್ತಿದ್ದರು. ಆದರೆ ರಾಮನು ಲಕ್ಷ್ಮಣನೊಡನೆ ಶಬರಿಯ ಬಡ ಗುಡಿಸಿಲಿಗೆ ಬಂದನು.

ಶಬರಿ ರಾಮನನನ್ನು ನೋಡಿ ಆನಂದತುಂದಿಲಳಾದಳು. "ಬಾ ರಾಮ ಬಾ ನಿನಗಾಗಿಯೇ ನಾನು ಕಾಯುತ್ತಿದ್ದೆ. ಅಷ್ಟು ಜನ ಮುನಿಗಳು ನಿನಗಾಗಿ ಕಾಯುತ್ತಿದ್ದರೂ ನೀನು ಈ ಬಡವೆಯ ಗುಡಿಸಲಿಗೆ ಬಂದೆಯಲ್ಲವೇ? ನನ್ನಜನ್ಮ ಧನ್ಯವಾಯಿತು' ಎಂದಳು. ರಾಮಲಕ್ಷ್ಮಣರಿಗೆ ತಾನು ತೆಗೆದಿರಿಸಿದ್ದ ಹಣ್ಣುಗಳನ್ನು ಕೊಟ್ಟಳು. ರಾಮನು ಶಬರಿಯ ಭಕ್ತಿಗೆ ಮೂಕನಾಗಿದ್ದನು. ಆ ಹಣ್ಣುಗಳು ಶಬರಿ ಕಚ್ಚಿ ಎಂಜಲು ಮಾಡದವುಗಳೆಂದರೂ ಅವನಿಗೇನೂ ಅನಿಸಲಿಲ್ಲ. ಚಪ್ಪರಿಸುತ್ತಾ ತಿಂದನು. ಅದಕ್ಕೆ ಜ್ಞಾನಿಗಳು ಹೇಳುತ್ತಾರೆ ಭಕ್ತರು ಭಕ್ತಿಯಿಂದ ಏನನ್ನು ಕೊಟ್ಟರೂ ದೇವರು ಸ್ವೀಕರಿಸುತ್ತಾನೆ. ಅವನಿಗೆ ಭಕ್ತಿ ಮುಖ್ಯವೇ ಹೊರತು ವಸ್ತುಗಳಲ್ಲ. ಲಕ್ಷ್ಮಣನು ಅವು ಎಂಜಲು ಹಣ್ಣುಗಳೆಂದು ಆಕ್ಷೇಪಿಸಿದರೂ ರಾಮನು ಶಬರಿಯ ಭಕ್ತಿಗೆ ಸೋತು ಅವುಗಳನ್ನು ತಿಂದನು. ರಾಮನು ಅಲ್ಲಿಗೆ ಬಂದ ಕಾರಣವೇನೆಂದು ಶಬರಿ ವಿಚಾರಿಸಿದಳು. ಸೀತೆಯನ್ನು ಹುಡುಕುತ್ತಿರುವ ವಿಚಾರವನ್ನು ರಾಮ ತಿಳಿಸಿದನು. "ತುಂಗಭದ್ರಾ ತೀರದಲ್ಲಿನ ಕಿಷ್ಕಿಂದೆಯಲ್ಲಿರುವ ಸುಗ್ರೀವನಿಂದ ನಿನಗೆ ಸಹಾಯವಾಗುವುದು. ನೀನು ಸೀತೆಯನ್ನು ಮರಳಿ ಹೊಂದಿ ಅಯೋಧ್ಯೆಯ ಚಕ್ರವರ್ತಿಯಾಗುತ್ತೀಯ' ಎಂದು ಹೇಳುತ್ತಾ ರಾಮನ ಪಾದಕ್ಕೆ ಕುಸಿದಳು. ರಾಮನ ಪಾದತಲದಲ್ಲಿಯೇ ಶಬರಿಯ ಪ್ರಾಣಪಕ್ಷಿ ಹಾರಿಹೋಗಿತ್ತು